## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 820/2015

ಸಾಕ್ಷಿಗೆ ದಿನಾಂಕ 28-03-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 23 P.W.: 11

| | | |
|---|---|---|
| ಹೆಸರು | ಃ | ಎಂ ವರದರಾಜು |
| ತಂದೆಯ ಹೆಸರು | ಃ | ನರಸಿಂಹಯ್ಯ |
| ವಯಸ್ಸು | ಃ | 65 ವರ್ಷ |
| ಉದ್ಯೋಗ | ಃ | ನಿ. ಡಿ ವೈ ಎಸ್ ಪಿ |
| ವಾಸ ಸ್ಥಳ | ಃ | ಭದ್ರಾವತಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 07-05-2015 ರಿಂದ 18-09-2016 ರವರೆಗೆ ಹೆಚ್ ಬಿ ಹಳ್ಳಿಯಲ್ಲಿ ಸಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ07-05-2015 ರಂದು ನಾನು ಲಿಂಗಸೂರು ವೃತ್ತ ಕಚೇರಿಯಿಂದ ವರ್ಗಾವಣೆಯಾಗಿ ಹೆಚ್ ಬಿ ಹಳ್ಳಿ ವೃತ್ತ ಕಚೇರಿಯಲ್ಲಿ ಚಾಸಾ-22 ರವರಿಂದ ಪ್ರಭಾರವನ್ನು ಪಡೆದುಕೊಂಡಿರುತ್ತೇನೆ ಮತ್ತು ಅದೇ ದಿನ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ತೆಗೆದುಕೊಂಡಿರುತ್ತೇನೆ. ದಿಃ07-07-2015 ರಂದು ಬೆಳಿಗ್ಗೆ ಪ್ರಕರಣದ ತನಿಖೆಯನ್ನು ಮುಂದುವರೆಸಿ 2 ನೇ ಆರೋಪಿತನು ಮಾನ್ಯ ಜಿಲ್ಲಾ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು ಅವನ ದಸ್ತಗಿರಿ ಕ್ರಮವನ್ನು ಜರುಗಿಸಿ ಆರೋಪಿತನ ಸ್ವಖುಷಿ ಹೇಳಿಕೆ ಪಡೆದುಕೊಂಡಿರುತ್ತೇನೆ. ಆತನು ತನ್ನ ಹೇಳಿಕೆಯಲ್ಲಿ ಈಗ 5-6 ತಿಂಗಳ ಹಿಂದೆ ದಿಃ13-12-2014 ರಂದು ರಾತ್ರಿ 1.30 ಗಂಟೆ ಸುಮಾರಿಗೆ ತಾನು ಮತ್ತು ತನ್ನ ಜೊತೆಯಲ್ಲಿ 1, 3, 4 ನೇ ಆರೋಪಿತರು ಸೇರಿ ಹಂಪಸಾಗರ-2 ಗ್ರಾಮದ ಪೋಸ್ ಕಚೇರಿ ಹತ್ತಿರದಲ್ಲಿರುವ ಒಂದು ಬೀಗ ಹಾಕಿದ ಮನೆಯ ಬೀಗವನ್ನು ಕಬ್ಬಿಣದ ರಾಡಿನಿಂದ ಮುರಿದು ಒಳಗೆ ಹಾಲಿನಲ್ಲಿದ್ದ ಮತ್ತೊಂದು ಹಾಕಿದ ಬೀಗವನ್ನು ಕಬ್ಬಿಣದ ರಾಡಿನಿಂದ ಮುರಿದು ಒಳಗೆ ಹೋಗಿ ಮನೆಯಲ್ಲಿ ಕಟ್ಟಿಗೆಯ ಕಪಾಟನ್ನು ಮುರಿದು ಮತ್ತು ಎರಡು ಕಬ್ಬಿಣದ ಗಾಡ್ರೆಜುಗಳನ್ನು ಕಬ್ಬಿಣದ ರಾಡಿನಿಂದ ಮುರಿದು ಅದರಲ್ಲಿದ್ದ ಸಾಮಾನುಗಳನ್ನು ಚೆಲ್ಲಾಪಿಲ್ಲಿ ಮಾಡಿ 2 ಬಂಗಾರದ ಅರಳಿನ ಉಂಗುರ, ಒಂದು ಬಂಗಾರ ಚೈನು, ಒಂದು ಜೊತೆ ಜುಮುಕಿ ಬೆಂಡೋಲೆ, ಒಂದು ಬಂಗಾರದ ಬೋರಮಾಳ ಸರ, ಒಂದು ತುಂಡು ಬಂಗಾರದ ಗಟ್ಟಿ ಮತ್ತು 20 ರೇಷ್ಮೆ ಸೀರೆಗಳನ್ನು ಕಳ್ಳತನ ಮಾಡಿಕೊಂಡು

ಬಂದು ಊರ ಮುಂದೆ ಶಾಲೆ ಹತ್ತಿರ ಹೋಗಿ ನಾವು ಕದ್ದ ಬಂಗಾರದ ವಸ್ತುಗಳನ್ನು ಹಂಚಿಕೊಂಡಿರುತ್ತೇವೆ 2 ನೇ ಆರೋಪಿತನ ಪಾಲಿಗೆ 2 ಬಂಗಾರದ ಅರಳಿನ ಉಂಗುರ ಮತ್ತು ಒಂದು ಗಟ್ಟಿ ಬಂಗಾರದ ತುಂಡು ಬಂದಿರುತ್ತದೆ. ನಂತರ ನಾವು ಕಳುವು ಮಾಡಿದ 20 ಸೀರೆಗಳನ್ನು ಏಣಗಿ ಬಸಾಪುರ ಹಳ್ಳದ ಪಕ್ಕದಲ್ಲಿ ಒಂದು ಭತ್ತದ ಹುಲ್ಲಿನ ಬಣವಿಯಲ್ಲಿ ಸೀರೆಗಳನ್ನು ಮತ್ತು ಕೃತ್ಯಕ್ಕೆ ಉಪಯೋಗಿಸಿದ ಕಬ್ಬಿಣದ ರಾಡನ್ನು ಬಚ್ಚಿಟ್ಟಿರುತ್ತೇವಂತಾ ಹೇಳಿರುತ್ತಾರೆ. ನಂತರ ತನ್ನ ಪಾಲಿಗೆ ಬಂದ 2 ಬಂಗಾರದ ಉಂಗುರಗಳನ್ನು ತನಗೆ ಖರ್ಚಿಗೆ ದುಡ್ಡಿಲ್ಲದ ಕಾರಣ ಅವುಗಳನ್ನು ಹಂಪಸಾಗರದ ಸಂತೆಯಲ್ಲಿ ಯಾರಿಗೋ ಒಬ್ಬರಿಗೆ ಮಾರಾಟ ಮಾಡಿ ಹಣವನ್ನು ಖರ್ಚು ಮಾಡಿಕೊಂಡಿರುತ್ತೇವಂತಾ ತಿಳಿಸಿರುತ್ತಾನೆ ಮತ್ತು ತನ್ನ ಭಾಗಕ್ಕೆ ಬಂದ ಬಂಗಾರದ ಗಟ್ಟಿಯನ್ನು ತಮ್ಮ ಮನೆಯಲ್ಲಿ ಪೆಟ್ಟಿಗೆಯಲ್ಲಿಟ್ಟಿದ್ದು ತನ್ನ ಜೊತೆ ಬಂದರೆ ಅದನ್ನು ಹಾಜರುಪಡಿಸುತ್ತೇನೆಂದು ತಿಳಿಸಿದ ಮೇರೆಗೆ ನಾನು, ಚಾಸಾ-16, ಚಾಸಾ-20, ಚಾಸಾ-13 ಸೇರಿ ಹಂಪಸಾಗರ ಉಪಠಾಣೆಗೆ ಹೋಗಿರುತ್ತೇವೆ ಅಲ್ಲಿ ತಂಬ್ರಹಳ್ಳಿ ಪೋಲೀಸ್ ಠಾಣೆಯಿಂದ ಚಾಸಾ-14 ಮತ್ತು 15 ರವರು ಬಂದಿರುತ್ತಾರೆ. ನಂತರ ಆರೋಪಿ ಹೇಳಿದಂತೆ ನಾವಿಬ್ಬರು ಪಂಚರಾದ ಚಾಸಾ-3 ಮತ್ತು 5 ರವರನ್ನು ಚಾಸಾ-13 ರವರ ಮೂಲಕ ಕರೆಸಿಕೊಂಡು ಅಕ್ಕಸಾಲಿಗ ಚಾಸಾ-11 ರವರನ್ನು ಬರಮಾಡಿಕೊಂಡು ಅವರಿಗೆ ಪ್ರಕರಣದ ಮಾಹಿತಿ ತಿಳಿಸಿ ಮತ್ತು ಆರೋಪಿಯನ್ನು ತೋರಿಸಿ ಆರೋಪಿತನು ಏನು ಹೇಳಿ ಏನು ಹಾಜರುಪಡಿಸುತ್ತಾನೋ ಅದನ್ನು ಜಪ್ತಿ ಮಾಡಿಕೊಳ್ಳಲು ಮತ್ತು ಜಪ್ತು ಪಂಚನಾಮೆಯನ್ನು ಬರೆಸಿಕೊಡಲು ನಮಗೆ ಸಹಕರಿಸಲು ಕೋರಿಕೊಂಡಿದ್ದು ಸದರಿಯವರು ಒಪ್ಪಿಕೊಂಡ ಮೇರೆಗೆ ಎಲ್ಲರೂ ಸೇರಿ ಹಂಪಸಾಗರ-2 ಉಪಠಾಣೆಯಿಂದ 11.15 ಗಂಟೆಗೆ ಬಿಟ್ಟು ಆರೋಪಿತನ ಮನೆಯ ಮುಂದೆ 11.20 ಗಂಟೆಗೆ ಭೇಟಿ ನೀಡಿದ್ದು ಆಗ ಆರೋಪಿತನು ತನ್ನ ಮನೆಯ ಒಳಗೆ ಹೋಗಿ ಒಂದು ಪೆಟ್ಟಿಗೆ ಒಳಗಿನಿಂದ ಒಂದು ಬಂಗಾರದ ಗಟ್ಟಿಯನ್ನು ತಂದು ಹಾಜರುಪಡಿಸಿದ್ದು ಅದನ್ನು ಚಾಸಾ-11 ರವರಿಂದ ಪರೀಕ್ಷಿಸಿ ಅದನ್ನು ತೂಕ ಮಾಡಲಾಗಿ ಅದು ಅಂದಾಜು 4 ಗ್ರಾಂ ಬಂಗಾರದ ಗಟ್ಟಿಯಾಗಿದ್ದು ಅದರ ಆಗಿನ ಅಂದಾಜು ಮೌಲ್ಯ ರೂ.9 ಸಾವಿರ ಆಗಿತ್ತು ಅದನ್ನು ಪಂಚರ ಸಮಕ್ಷಮ ಜಪ್ತು ಮಾಡಿಕೊಳ್ಳಲಾಯಿತು. ಅದನ್ನು ನಿಪಿ-19 ರಂತೆ ಆ ದಿನ 11 ರಿಂದ 12 ಗಂಟೆಯವರೆಗೆ ಪಂಚರ ಸಮಕ್ಷಮ ಜರುಗಿಸಲಾಯಿತು. ಸದರಿ ದಾಖಲೆಗೆ ನಾನು ಸಹಿ ಮಾಡಿದ್ದು ಸಾಕ್ಷಿ ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-19 ಬಿ ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಆರೋಪಿತ, ಪಂಚರು ಮತ್ತು ದಸ್ತೂರು ಸಹಿ ಪಡೆದಿರುತ್ತೇನೆ. ಸದರಿ ಬಂಗಾರದ ಗಟ್ಟಿಯ ಬಗ್ಗೆ ಪಿ ಎಫ್ ನಂ.14/2015 ರಂತೆ ಮಾನ್ಯ

ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ದಾಖಲೆ ನೋಡಿದರೆ ಗುರುತಿಸುತ್ತೇನೆ ಸಾಕ್ಷಿಯು ಸದರಿ ದಾಖಲೆ ನೋಡಿ ಗುರುತಿಸಿದ್ದು ಅದನ್ನು ನಿಪಿ-22 ಎಂದು ಮತ್ತು ಸಹಿಯನ್ನು ನಿಪಿ-22 ಎ ಎಂದು ಗುರುತಿಸಲಾಯಿತು. ನಂತರ ಆರೋಪಿತನನ್ನು ನ್ಯಾಯಾಲಯದ ಆದೇಶದಂತೆ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು.

ಅದೇ ದಿನ ಚಾಸಾ-1, 6 ರಿಂದ 10 ರವರ ಮರುಹೇಳಿಕೆ ಪಡೆದಿದ್ದೇನೆ ಮತ್ತು ಆ ಸಮಯದಲ್ಲಿ ಅವರಿಗೆ ಆರೋಪಿತರನ್ನು ಬಂಗಾರದ ಗಟ್ಟಿಯನ್ನು ತೋರಿಸಿರುತ್ತೇನೆ. ಅದೇ ದಿನ ಚಾಸಾ-13 ರಿಂದ 16, 20, 11 ರವರ ಹೇಳಿಕೆ ಪಡೆದಿದ್ದೇನೆ. ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡಿದ್ದರಿಂದ 4 ಜನ ಆರೋತಪಿರ ವಿರುದ್ಧ ಆರೋಪ ಪಟ್ಟಿಯನ್ನು ದಿಃ13-02-2014 ರಂದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. 2 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. 2 ನೇ ಆರೋಪಿ ಗೈರುಹಾಜರಾಗಿರುವುದರಿಂದ ಅವರ ಗುರುತಿಸುವಿಕೆಗೆ ತಕರಾರು ಇಲ್ಲ ಅಂತಾ ಹೇಳಿರುತ್ತಾರೆ. ಸದರಿ ಬಂಗಾರದ ಗಟ್ಟಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ.

ಪಾಟೀ ಸವಾಲು. 1 ನೇ ಆರೋಪಿ ಪರ ಶ್ರೀ ಪಿ ಆರ್ ವಕೀಲರಿಂದಃ-

ನಾನು ವಿವರವಾಗಿ ತನಿಖೆ ಮಾಡಿದ ನಂತರ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. 2 ನೇ ಆರೋಪಿತನ ಸ್ವ ಹೇಳಿಕೆಯನ್ನು ಪಡೆದಿರುತ್ತೇನಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಚಾಸಾ-11 ಅಕ್ಕಸಾಲಿಗ ಇವರಿಗೆ ನೋಟೀಸು ಕೊಟ್ಟು ಕರೆಸಿಕೊಂಡಿಲ್ಲ ಚಾಸಾ-13 ರವರ ಮುಾಲಕ ಕರೆಸಿಕೊಂಡಿರುತ್ತೇನೆ. ನಾನು ಆ ದಿನ ಉಪಠಾಣೆ ಬಿಟ್ಟಾಗ ಸಮಯ 11.15 ಗಂಟೆಯಾಗಿತ್ತು. ಸದರಿ ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ನಾನೇ ಉಕ್ತಲೇಖನವನ್ನು ಚಾಸಾ-16 ರವರ ಮೂಲಕ ಬರೆಸಿರುತ್ತೇನೆ. ಚಾಸಾ-11 ರವರು ತನ್ನ ಜೊತೆ ಒಂದು ತೂಕದ ಯಂತ್ರ ತಂದಿದ್ದರು ಅದರ ಹೆಸರು ನನಗೆ ಗೊತ್ತಿಲ್ಲ ಅದರಿಂದ ತೂಕ ಮಾಡಿರುತ್ತಾರೆ. ಪಂಚನಾಮೆ ಸಮಯದಲ್ಲಿ ಯಾವುದೇ ಫೋಟೋಗಳು ಅಥವಾ ವಿಡಿಯೋಗಳನ್ನು ಮಾಡಿಲ್ಲ. ಆ ದಿನ ನನ್ನ ಜೊತೆಗಿದ್ದ ಸಿಬಬಂದಿಗಳು ಯಾರೂ ಸಹಿ ಮಾಡಿಲ್ಲ ದಸ್ತೂರು ಮಾತ್ರ ಸಹಿ ಮಾಡಿರುತ್ತಾರೆ. ಪಂಚನಾಮೆ ಬರೆದ ಸ್ಥಳದ ಚಕ್ಕುಬಂದಿ ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಪಂಚನಾಮೆ ಬರೆದ ಸ್ಥಳ 2 ನೇ ಆರೋಪಿ ಉಮೇಶನ ಮನೆಯಾಗಿರುತ್ತದೆ ಅದರ ಚಕ್ಕುಬಂದಿ ಪೂಃಖಾಲಿ ಜಾಗ ಅದರ ನಂತರ ಸಿದ್ಧಪ್ಪನವರ ಮನೆ, ಪಃಧರ್ಮಪ್ಪರವರ ಮನೆ, ಉಃಬಾಗಿಲು ಮತ್ತು ರಸ್ತೆ ಹಾಗೂ ದಃ ಜಯಪ್ಪರವರ ಮನೆ. ನಾನು ಹೇಳುವ ಹಾಗೆ ಚಾಸಾ-1, 6 ರಿಂದ 10 ಮತ್ತು ಉಳಿದ ಸಾಕ್ಷಿದಾರರ ಹೇಳಿಕೆಯನ್ನು ಪಡೆದಿರುತ್ತೇನಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ವಿಳಂಬವಾಗಿ ಅಂತಿಮ

ವರದಿ ಸಲ್ಲಿಸಿರುವ ಬಗ್ಗೆ ಯಾವುದೇ ವಿವರವನ್ನು ಅಂತಿಮ ವರದಿಯಲ್ಲಿ ನೀಡಿಲ್ಲವೆಂದರೆ ಸರಿ. ಸದರಿ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಚಾಸಾ-1 ರವರು ಒಂದು ಸುಳ್ಳು ದೂರನ್ನು ನೀಡಿದ್ದು ಅವರಿಗೆ ಸಹಾಯವಾಗಲು ನಾನು ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. 2 ನೇ ಆರೋಪಿ ಪರ ಶ್ರೀ ಕೆ ಜೆ ವಕೀಲರಿಂದಃ-

ಚಾಸಾ-1 ರವರು ಸದರಿ ಬಂಗಾರದ ಗಟ್ಟಿಯ ಬಗ್ಗೆ ನನ್ನ ಮುಂದೆ ಯಾವುದೇ ದಾಖಲೆ ಹಾಜರು ಮಾಡಿಲ್ಲ. ಆ ದಿನ ನಾನು ಯಾವುದೇ ಬಂಗಾರದ ಗಟ್ಟಿಯನ್ನು 2 ನೇ ಆರೋಪಿಯಿಂದ ಅಮಾನತುಪಡಿಸಿಕೊಂಡಿಲ್ಲ ಅಲ್ಲಿ ಯಾವುದೇ ಪಂಚನಾಮೆ ಜರುಗಿಸಿಲ್ಲ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2 ನೇ ಆರೋಪಿಗೂ ಮು ಮಾಲಿಗೂ ಯಾವುದೇ ಸಂಬಂಧ ಇಲ್ಲವೆಂದರೆ ಸರಿಯಲ್ಲ.

. 3 ನೇ ಆರೋಪಿ ಪರ ವಕೀಲರು 1 ಮತ್ತು 2 ನೇ ಆರೋಪಿತರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ